**ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಅರಕಲಗೂಡು**

**ಸಿ. ಸಿ. ನಂಃ264/2017**

| | | | |
|---|---|---|---|
| ಸಾಕ್ಷಿಯ ಹೆಸರು | ಃ ಸವಿ ಸಿ.ಯು. | ದಿನಾಂಕ | ಃ 15/11/2022 |
| ಗಂಡನ ಹೆಸರು | ಃ ಲೋಕೇಶ್ | ಸಿ ಡಬ್ಲ್ಯೂ | ಃ 01 |
| ವಯಸ್ಸು | ಃ 33 ವರ್ಷ | ಪಿ ಡಬ್ಲ್ಯೂ | ಃ 01 |
| ಉದ್ಯೋಗ | ಃ ಪೋಲಿಸ್ ಸಬ್ ಇನ್ಸ್ ಪೆಕ್ಟರ್ | | |
| ವಿಳಾಸ | ಃ ಮಡಿಕೇರಿ ಅರಣ್ಯ ಮೊಬೈಲ್ ಸ್ಕ್ವಾಡ್ | | |

ಪ್ರಮಾಣ ವಚನ ಬೋಧಿಸಲಾಯಿತು.
ಮುಖ್ಯ ವಿಚಾರಣೆ ಸಸಅ ರವರಿಂದ ಃ-

ನಾನು ದಿಃ23-06-2014 ರಿಂದ ದಿಃ24-05-2016 ವರೆಗೆ ಕೊಣನೂರು ಪೊಲೀಸ್ ಠಾಣೆಯಲ್ಲಿ ಪಿ.ಎಸ್.ಐ. ಆಗಿ ಕರ್ತವ್ಯವನ್ನು ನಿರ್ವಹಿಸಿರುತ್ತೇನೆ.

ನ್ಯಾಯಾಲಯದ ಮುಂದೆ ಇರುವ ಆರೋಪಿ ನನಗೆ ಗೊತ್ತು.

ದಿನಾಂಕ:-12-07-2015 ರಂದು ಬೆಳಿಗ್ಗೆ 11.00 ಗಂಟೆ ಸಮಯದಲ್ಲಿ ನಾನು ಮತ್ತು ಸಿಬ್ಬಂದಿಗಳು ರಾಮನಾಥಪುರದಲ್ಲಿ ನಾಗರಾಜು ಎಂಬುವರು ಸಾರ್ವಜನಿಕರಿಗೆ ಹಣ ಕೊಟ್ಟು ಬಡ್ಡಿ ದಂಧೆ ನಡೆಸುತ್ತಾರೆ ಎಂಬ ಮಾಹಿತಿ ಮೇರೆಗೆ ಅವರ ಮನೆಯನ್ನು ಪರೀಶೀಲಿಸಲು ಹೋಗುತ್ತಿದ್ದಾಗ ಯಾರೋ ಪೋಲಿಸ್ ಬಾತ್ಮೀದಾರರು ನನಗೆ ಕರೆ ಮಾಡಿ ಕೊಣನೂರಿನಲ್ಲಿ ವಾಸವಾಗಿರುವ 1). ಮಂಜು ಬಿನ್ ಲೇಟ್ ಕುಮ್ಮಣ್ಣ, 26 ವರ್ಷ, ಅಂಬೇಡ್ಕರ್ ನಗರ, ಕೊಣನೂರು ಟೌನ್, 2). ರಮೇಶ. ಕೆ.ಆರ್. ಬಿನ್ ಲೇಟ್ ರಾಮಯ್ಯ, 42 ವರ್ಷ, ವ್ಯವಸಾಯ, ಅಂಬೇಡ್ಕರ್ ನಗರ, ಕೊಣನೂರು ಟೌನ್, 3). ಶಾಂತಲಕ್ಷ್ಮಿ ಕೋಂ ಶಂಕರ, 55 ವರ್ಷ, ಜನತಾ ಕಾಲೋನಿ, ಕೊಣನೂರು ಟೌನ್ 4) ಮಹೇಶ ಬಿನ್ ಕಾಳಯ್ಯ, 34 ವರ್ಷ, ಮ್ಯಾಕ್ಸಿ ಕ್ಯಾಬ್ ಮಾಲೀಕರು, ಅಂಬೇಡ್ಕರ್ ನಗರ, ಕೊಣನೂರು ಟೌನ್ 5) ರವಿಕುಮಾರ. ಬಿ.ವೈ. ಬಿನ್ ಲೇಟ್ ಯಡಿಯೂರಶೆಟ್ಟಿ 47 ವರ್ಷ, ಬಸವಾಪಟ್ಟಣ ಟೌನ್, ರಾಮನಾಥಪುರ ಹೋ||, ಅರಕಲಗೂಡು ತಾ||. ಎಂಬುವವರು ಯಾವುದೇ ಪರವಾನಿಗೆ ಇಲ್ಲದೆ ಸಾರ್ವಜನಿಕರಿಗೆ ಸಾಲವಾಗಿ ಹಣ ನೀಡಿ ಅವರಿಂದ ಅಧಿಕ ಬಡ್ಡಿ ಮರಿ ಬಡ್ಡಿ ವಸೂಲಿ ಮಾಡಿ ಸಾರ್ವಜನಿಕರಿಗೆ ವಂಚಿಸುತ್ತ ಬಡ್ಡಿ ದಂದೆಯಲ್ಲಿ ತೊಡಗಿದ್ದಾರೆಂದು ಬಂದ ಖಚಿತ ಮಾಹಿತಿಯನ್ನು ಮಾನ್ಯ ಹೊಳೆನರಸೀಪುರ ಉಪ ವಿಭಾಗದ ಎ.ಎಸ್.ಪಿ. ಸಾಹೇಬರಿಗೆ ವಿಚಾರ ತಿಳಿಸಿ ನಂತರ ಮಾನ್ಯ ಎ.ಎಸ್.ಪಿ. ಸಾಹೇಬರವರಿಂದ ಶೋಧನೆ ಮಾಡುವ ಆದೇಶದ ವಾರೆಂಟ್ ಪಡೆದು ಖಚಿತ

ಮಾಹಿತಿ ಮೇರೆಗೆ ನಾನು ಠಾಣಾ ಸಿಬ್ಬಂದಿಗಳಾದ ಚಾತಾ-2 ರಿಂದ ಚಾಸಾ-5 ರವರುಗಳನ್ನು ಮತ್ತು ಪಂಚರುಗಳಾದ ಚಾಸಾ-7 ಮತ್ತು ಚಾಸಾ-8 ರವರುಗಳನ್ನು ಕರೆದುಕೊಂಡು ಇಲಾಖಾ ಜೀಪಾದ ಕೆ.ಎ-13, ಜಿ-597 ರಲ್ಲಿ ಚಾಲಕ ಚಾಸಾ-06 ರವರೊಂದಿಗೆ ಮದ್ಯಾಹ್ನ 1.00 ಗಂಟೆಗೆ ಠಾಣೆಯಿಂದ ಹೊರಟು ಮಂಜು ಬಿನ್ ಲೇಟ್ ಕುಮ್ಮಣ್ಣ, ಅಂಬೇಡ್ಕರ್ ನಗರ, ಕೊಣನೂರು ಟೌನ್ ರವರ ಮನೆಯ ಹತ್ತಿರ ಹೋಗಿ ಮನೆಯಲ್ಲಿದ್ದ ವ್ಯಕ್ತಿಯನ್ನು ಮದ್ಯಾಹ್ನ 1.10 ಕ್ಕೆ ಹಿಡಿದುಕೊಂಡು ಈತನ ಹೆಸರು ವಿಳಾಸ ಕೇಳಲಾಗಿ ಮಂಜು ಬಿನ್ ಲೇಟ್ ಕುಮ್ಮಣ್ಣ, 26 ವರ್ಷ, ಅಂಬೇಡ್ಕರ್ ನಗರ, ಕೊಣನೂರು ಟೌನ್ ಎಂದು ತಿಳಿಸಿದ್ದು, ನಂತರ ಇವರಿಗೆ ನೀವು ಬಡ್ಡಿ ದಂದೆಯಲ್ಲಿ ತೊಡಗಿದ್ದೀರಿ ಎಂದು ಬಂದಿರುವ ಮಾಹಿತಿಯ ವಿಚಾರವನ್ನು ತಿಳಿಸಿ ಹಾಗೂ ಇವರಿಗೆ ಜಪ್ತಿ ವಾರೆಂಟನ್ನು ತೋರಿಸಿ ನಂತರ ಪಂಚಾಯ್ತಿದಾರರ ಸಮಕ್ಷಮ ಇವರ ಮನೆ ಬೀರುವಿನ ಬಾಗಿಲನ್ನು ಆ ವ್ಯಕ್ತಿಯಿಂದಲೇ ತೆಗೆಸಿ ಜಪ್ತಿ ಮಾಡಲಾಗಿ ಸದರಿ ಬೀರುವಿನಲ್ಲಿದ್ದ

1). ಎಸ್.ಬಿ.ಎಂ. ಕೊಣನೂರು ಖಾತಾ ನಂಬರ್ 64108284712 ರ ಒಂದು ಖಾಲಿ ಚೆಕ್ ಇದ್ದು, ಭಾರ್ಗವ ಎಂದು ಸಹಿ ಇದ್ದು,

2). ಎಸ್.ಬಿ.ಎಂ. ಕೊಣನೂರು ಖಾತಾ ನಂಬರ್ 54023438209 ರ ಒಂದು ಖಾಲಿ ಚೆಕ್ ಇದ್ದು, ಹೆಚ್.ಪಿ. ವಿಜಯಕುಮಾರ ಎಂದು ಸಹಿ ಇದ್ದು,

3). ಎಸ್.ಬಿ.ಎಂ. ಕೊಣನೂರು ಖಾತಾ ನಂಬರ್ 64024399635 ರ ಒಂದು ಖಾಲಿ ಚೆಕ್ ಇದ್ದು, ಮಂಜ ಎಂದು ಸಹಿ ಇದ್ದು,

4). ಎಸ್.ಬಿ.ಎಂ. ಕೊಣನೂರು ಖಾತಾ ನಂಬರ್ 64020333553 ರ ಒಂದು ಖಾಲಿ ಚೆಕ್ ಇದ್ದು, ಡಾ|| ಅನಿಲ್ ಕುಮಾರ್ ಎಂದು ಸಹಿ ಇದ್ದು,

5). ಎಸ್.ಬಿ.ಎಂ. ಕೊಣನೂರು ಖಾತಾ ನಂಬರ್ 64003231188 ರ ಒಂದು ಖಾಲಿ ಚೆಕ್ ಇದ್ದು, ಮಂಜ ಎಂದು ಸಹಿ ಇದ್ದು,

6). ಎಸ್.ಬಿ.ಎಂ. ಕೊಣನೂರು ಖಾತಾ ನಂಬರ್ 64054589879 ರ ಒಂದು ಖಾಲಿ ಚೆಕ್ ಇದ್ದು, ರಾಜ ಎಂದು ಸಹಿ ಇದ್ದು,

7). ಎಸ್.ಬಿ.ಎಂ. ಕೊಣನೂರು ಖಾತಾ ನಂಬರ್ 64071388550 ರ ಒಂದು ಖಾಲಿ ಚೆಕ್ ಇದ್ದು, ಎಸ್.ಎಸ್. ಗೋವಿಂದರಾಜು ಎಂದು ಸಹಿ ಇದ್ದು,

8). ಎಸ್.ಬಿ.ಎಂ. ಕೊಣನೂರು ಖಾತಾ ನಂಬರ್ 64058031491 ರ ಒಂದು ಖಾಲಿ ಚೆಕ್ ಇದ್ದು, ಸರೋಜ ಎಂದು ಸಹಿ ಇದ್ದು,

9). ಎಸ್.ಬಿ.ಎಂ. ಕೊಣನೂರು ಖಾತಾ ನಂಬರ್ 54026959068 ರ ಒಂದು ಖಾಲಿ ಚೆಕ್ ಇದ್ದು, ಪಾರ್ವತಿ ಎಂದು ಸಹಿ ಇದ್ದು,

10). ಕೆನರಾ ಬ್ಯಾಂಕ್, ರಾಮನಾಥಪುರ ಖಾತಾ ನಂಬರ್ 0550101004639 ರ ಒಂದು ಖಾಲಿ ಚೆಕ್ ಇದ್ದು, ಎ.ಆರ್. ದೇವರಾಜೇಗೌಡ ಎಂದು ಸಹಿ ಇದ್ದು,

11). ಅಲಹಾಬಾದ್ ಬ್ಯಾಂಕ್ ಹಾಸನ ಬ್ರಾಂಚ್ 21097799218 ರ ಖಾಲಿ ಚೆಕ್ ರವಿ. ಎನ್.ಇ. ಎಂದು ಸಹಿ ಇದ್ದು,

12). ಕರ್ನಾಟಕ ಬ್ಯಾಂಕ್, ಅರಕಲಗೂಡು ಬ್ರಾಂಚ್ 0082500101135800 ರ ಖಾಲ ಚೆಕ್ ಇಂಗ್ಲೀಷ್ ನಲ್ಲಿ ಸಹಿ ಇದ್ದು,

13). ಕಾವೇರಿ ಕಲ್ಪತರು ಗ್ರಾಮೀಣ ಬ್ಯಾಂಕ್ ಕೊಣನೂರು ಬ್ರಾಂಚ್ 85017383141 ರ ಖಾಲಿ ಚೆಕ್ ವೆಂಕಟೇಶ ಎಂಬ ಸಹಿ ಇದ್ದು,

14). ಕಾರ್ಪೋರೇಷನ್ ಬ್ಯಾಂಕ್ ಕೆ.ಆರ್. ಪುರಂ ಬ್ರಾಂಚ್ 212900101020024 ರ ಇಂಗ್ಲೀಷ್ ನಲ್ಲಿ ಸಹಿ ಮಾಡಿರುವ ಖಾಲಿ ಚೆಕ್ ಹಾಗೂ

15). ಸ್ಟಾಂಪ್ ಪೇಪರ್

16). ಇಂಗ್ಲೀಷ್ ನಲ್ಲಿ ಸಹಿ ಮಾಡಿರುವ ಒಂದು 29 ಫಾರಂ,

17). ಆನಂದ ಬಿನ್ ಹಾಲಯ್ಯ ಎಂದು ಬರೆದಿರುವ 1 ಪ್ರನೋಟ್,

18). ಎಸ್.ಎಸ್. ಗೋವಿಂದರಾಜ ಬಿನ್ ಸಣ್ಣಯ್ಯ ಎಂದು ಬರೆದಿರುವ 1 ಪ್ರನೋಟ್,

19). ಒಂದು ಖಾಲಿ ಆನ್ ಡಿಮೆಂಡ್ ಪ್ರನೋಟ್,

20). ರಾಜು ಎಂದು ಸಹಿ ಮಾಡಿರುವ 1 ಆನ್ ಡಿಮ್ಯಾಂಡ್ ಪ್ರನೋಟ್,

21). ರವಿ ಎಂದು ಸಹಿ ಮಾಡಿರುವ 1 ಆನ್ ಡಿಮ್ಯಾಂಡ್ ಪ್ರನೋಟ್,

22). ಲೋಕೇಶ ಎಂದು ಸಹಿ ಮಾಡಿರುವ 1 ಆನ್ ಡಿಮ್ಯಾಂಡ್ ಪ್ರನೋಟ್,

23). ಭಾಗ್ಯ ಎಂದು ಸಹಿ ಮಾಡಿರುವ 1 ಆನ್ ಡಿಮ್ಯಾಂಡ್ ಪ್ರನೋಟ್,

24). ರಘು ಎಂದು ಸಹಿ ಮಾಡಿರುವ 1 ಆನ್ ಡಿಮ್ಯಾಂಡ್ ಪ್ರನೋಟ್,

25). ರವಿ. ಎನ್,ಇ. ಎಂದು ಸಹಿ ಮಾಡಿರುವ 1 ಆನ್ ಡಿಮ್ಯಾಂಡ್ ಪ್ರನೋಟ್

26) ಎಸ್ ಬಿ ಎಂ ಕೊಣನೂರು ಶಾಖಾ ಖಾತೆ ನಂ 54026959068 ರ ಸಹಿ ಇಲ್ಲದ 16 ಖಾಲಿ ಚೆಕ್ ಗಳು

27) ಕಾವೇರಿ ಗ್ರಾಮೀಣ ಬ್ಯಾಂಕ್ ಅರಕಲಗೂಡು ಬ್ರಾಂಚ್ ರ ಖಾತೆನಂ 85010957078 ರ ಪಾರ್ವತಿ ಎಸ್ ಎಂ ಎಂದು ಸಹಿ ಮಾಡಿರುವ ಚೆಕ್

28) ಲೆಕ್ಕ ಪತ್ರ ಬರೆದಿರುವ ಪುಸ್ತಕ ಇದ್ದು,

ಇವುಗಳ ಬಗ್ಗೆ ವಿಚಾರ ಮಾಡಲಾಗಿ ಸದರಿ ಮಂಜುರವರು ನಾನು ಹಣಕಾಸಿನಲ್ಲಿ ಸ್ಥಿತಿವಂತನಾಗಿದ್ದು ಸಾರ್ವಜನಿಕರಿಗೆ ನಾನು ಹಣವನ್ನು ಸಾಲವಾಗಿ ನೀಡಿ ಸಾರ್ವಜನಿಕರಿಂದ ಈ ರೀತಿಯಾದ ಖಾಲಿ ಚೆಕ್ ಗಳು ಮತ್ತು ಖಾಲಿ ಪ್ರನೋಟ್ ಗಳಿಗೆ ಅವರ ಸಹಿ ಪಡೆದು ಅನಂತರ ಅಧಿಕ ಬಡ್ಡಿ ಮರಿ ಬಡ್ಡಿ ವಸೂಲಿ ಮಾಡಲು ಇವುಗಳನ್ನು ಬಳಸಿಕೊಳ್ಳುವುದಾಗಿ ತಿಳಿಸಿರುತ್ತಾರೆ. ನಂತರ ಮೇಲ್ಕಂಡ ವ್ಯಕ್ತಿ ಹಣಕಾಸಿನ ವ್ಯವಹಾರವನ್ನು ಪರವಾನಗಿ ಇಲ್ಲದೇ ನಡೆಸಿ ಸಾರ್ವಜಿನಕರಿಗೆ ವಂಚಿಸಿ ಬಡ್ಡಿ ದಂಧೆಯಲ್ಲಿ ನಿರತರಾಗಿರುವುದು ಕಂಡು ಬಂದ ಮೇರೆಗೆ ಮೇಲ್ಕಂಡ ಚೆಕ್ ಹಾಗೂ ಪ್ರನೋಟನ್ನು ಪಂಚರ ಸಮಕ್ಷಮ ಮದ್ಯಾಹ್ನ 1.20 ರಿಂದ 1.40 ಗಂಟೆಯವೆರೆಗೆ ಮಹಜರ್ ಮೂಲಕ ವಶಕ್ಕೆ ತೆಗೆದುಕೊಂಡು ಸದರಿ ಬಡ್ಡಿ ದಂಧೆಯಲ್ಲಿ ತೊಡಗಿರುವ ಆರೋಪಿಯನ್ನು ವಶಕ್ಕೆ ತೆಗೆದುಕೊಂಡು ಠಾಣೆಗೆ ವಾಪಸ್ ಮಧ್ಯಾಹ್ನ 1.50 ಗಂಟೆಗೆ ಬಂದು ಮಧ್ಯಾಹ್ನ 1.50 ಗಂಟೆಯಿಂದ 2.20 ಗಂಟೆವರೆಗೆ ವರದಿ ತಯಾರಿಸಿ ಮಧ್ಯಾಹ್ನ 2.20 ಗಂಟೆಗೆ ಠಾಣೆಯಲ್ಲಿದ್ದ ಎಸ್ ಹೆಚ್ ಓ ರವರಾದ ಚಾಸಾ-23 ರವರಿಗೆ ಸದರಿ ಆರೋಪಿ ಮೇಲೆ ಮುಂದಿನ ಕಾನೂನು ಕ್ರಮ ಜರುಗಿಸಲು ವರದಿ ಮತ್ತು ಮಹಜರ್ ಹಾಗೂ ದಾಖಲೆ ಮತ್ತು ಆರೋಪಿಯನ್ನು ಒಪ್ಪಿಸಿರುತ್ತೇನೆ. ಸದರಿ ನಿವೇದನೆಯನ್ನು ನೋಡಿದರೆ ಗುರುತಿಸಬಲ್ಲೆ. ಅದನ್ನು ನಿಪಿ-1 ಎಂದು ಹಾಗೂ ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಸದರಿ ಮಹಜರ್ ನ್ನು ಕೂಡ ನಾನು ನೋಡಿದರೆ ಗುರುತಿಸಬಲ್ಲೆ. ಅದನ್ನು ನಿಪಿ-2 ಎಂದು ಹಾಗೂ ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ನಂತರ ಈ ಪ್ರಕರಣದ ಕಡತವನ್ನು ಚಾಸಾ-23 ರವರಿಂದ ಪಡೆದು ತನಿಖೆಯನ್ನು ಮುಂದುವರೆಸಿ ಅಮಾನತ್ತು ಪಡಿಸಿಕೊಂಡ ಬ್ಯಾಂಕ್ ಚೆಕ್ ಗಳು ಮತ್ತು ದಾಖಲಗಳನ್ನು ಠಾಣಾ ಮಾಲುಪಟ್ಟಿ ನಂಃ159/2015 ರಲ್ಲಿ ನಮೂದಿಸಿಕೊಂಡು ಮಾನ್ಯ ನ್ಯಾಯಾಲಯದ ಅನುಮತಿಗಾಗಿ ನಿವೇದಿಸಿಕೊಳ್ಳಲಾಯಿತು. ಸದರಿ ಚೆಕ್ ಗಳು ಮತ್ತು ಪ್ರನೋಟ್ ಗಳನ್ನು ನೋಡಿದರೆ ಗುರುತಿಸಬಲ್ಲೆ. ಅವುಗಳನ್ನು ಎಂ.ಓ-1 ರಿಂದ ಎಂ.ಓ-28 ಎಂದು ಗುರುತಿಸಲಾಯಿತು. ನಂತರ ಆರೋಪಿ ವಿಚಾರಣೆ ಮಾಡಿ ಅವರ ಸ್ವಇಚ್ಛಾ ಹೇಳಿಕೆಯನ್ನು ದಾಖಲಿಸಿಕೊಂಡಿರುತ್ತೇನೆ. ಸದರಿ ಸ್ವಇಚ್ಛಾ ಹೇಳಿಕೆಯನ್ನು ನೋಡಿದರೆ ಗುರುತಿಸಬಲ್ಲೆ. ಸದರಿ ಸ್ವಇಚ್ಛಾ ಹೇಳಿಕೆಯನ್ನು ನಿಪಿ-3 ಎಂದು ಹಾಗೂ ಅದರಲ್ಲಿನ ಸಾಕ್ಷಿಯ ಸಹಿಯನ್ನು

ನಿಪಿ-3(ಎ) ಎಂದು ಗುರುತಿಸಲಾಯಿತು. ನಂತರ ಆರೋಪಿಯ ವಿರುದ್ಧ ಮಾನ್ಯ ಸರ್ವೋಚ್ಚ ನ್ಯಾಯಾಲಯದ ದಸ್ತಗಿರಿ ಕ್ರಮಗಳನ್ನು ಅನುಸರಿಸಿ ಆರೋಪಿಯನ್ನು ಸಿಬ್ಬಂದಿಗಳೊಂದಿಗೆ ಮಾನ್ಯ ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ.

ನಂತರ ತನಿಖೆಯನ್ನು ಮುಂದುವರೆಸಿ ಸಾಕ್ಷಿದಾರರಾದ ಚಾಸಾ-2 ರಿಂದ ಚಾಸಾ-9 ರವರ ಹೇಳಿಕೆಗಳನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ನಂತರ ತನಿಖೆಯನ್ನು ಮುಂದುವರೆಸಿ ಸಹಾಯಕ ಸಹಕಾರ ಸಂಘಗಳ ಉಪ ನಿಭಂಧಕರು ಚಾಸಾ-10 ರವರಿಗೆ ಸದರಿ ಆರೋಪಿಯ ಹಣಕಾಸಿನ ವ್ಯವಹಾರ ಮತ್ತು ಲೇವಾದೇವಿ ನಡೆಸಲು ಪರವಾನಗಿಯನ್ನು ಪಡೆದಿರುವ ಬಗ್ಗೆ ಮಾಹಿತಿ ನೀಡಲು ಕೋರಿ ಮನವಿ ಪತ್ರವನ್ನು ನೀಡಲಾಯಿತು. ನಂತರ ನನಗೆ ವರ್ಗಾವಣೆಯಾದ್ದರಿಂದ ಮುಂದಿನ ತನಿಖೆಗಾಗಿ ಚಾಸಾ-23 ರವರಿಗೆ ವಹಿಸಿಕೊಟ್ಟಿರುತ್ತೇನೆ.

## ಪಾಟೀ ಸವಾಲುಃ ಶ್ರೀ. ಎ.ಹೆಚ್.ಆರ್. ವಕೀಲರಿಂದ ಆರೋಪಿಯ ಪರವಾಗಿಃ

ಬಾತ್ಮೀದಾರರಿಂದ ಮಾಹಿತಿ ಬಂದ ವಿವಾರವನ್ನು ನಮ್ಮ ಠಾಣಾ ಡೈರಿಯಲ್ಲಿ ನಮೂದು ಮಾಡಿರುತ್ತೇನೆ. ಸದರಿ ಡೈರಿಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ. ಸದರಿ ಡೈರಿಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲು ತೊಂದರೆ ಇರುವುದಿಲ್ಲ. ಶೋಧನಾ ವಾರೆಂಟ್ ನ್ನು ನಾನು ಲಿಖಿತವಾಗಿ ಪಡೆದುಕೊಂಡಿರುತ್ತೇನೆ. ಸದರಿ ಶೋಧನ ವಾರೆಂಟ್ ನ್ನು ಕಡತದಲ್ಲಿ ಸೇರಿಸಿದ್ದೀರಾ ಎಂದರೆ, ಸಾಕ್ಷಿಯ ದೋಷರೋಪಣ ಪಟ್ಟಿಯನ್ನು ಬೇರೆ ಅಧಿಕಾರಿಯು ಸಲ್ಲಿಸಿರುತ್ತಾರೆ ಎಂದು ನುಡಿಯುತ್ತಾರೆ. ಸಂಜ್ಞೆಯ ಅಪರಾಧಗಳಲ್ಲಿ ಪ್ರ.ವ.ವರದಿಯನ್ನು ದಾಖಲಿಸಿದ ನಂತರ ತನಿಖೆಯನ್ನು ಮಾಡಬೇಕು ಎಂದು ಕಾನೂನು ಇದೆ ಎಂದರೆ ಸರಿ. ಆ ರೀತಿ ಮೊದಲಿಗೆ ಪ್ರ.ವ.ವರದಿಯನ್ನು ದಾಖಲಿಸಲು ಏನಾದರೂ ತೊಂದರೆ ಇತ್ತಾ ಎಂದರೆ ನಮಗೆ ಖಚಿತ ಮಾಹಿತಿ ಇರಲಿಲ್ಲ ಎಂದು ನುಡಿಯುತ್ತಾರೆ. ಶೋಧನಾ ವಾರೆಂಟ್ ನಲ್ಲಿ ಅಪರಾಧ ಸಂಖ್ಯೆಯನ್ನು ನಮೂದಿಸಿಲ್ಲ ಸಾಕ್ಷಿಯು ಮುಂದುವರೆದು ಬಾತ್ಮೀದಾರರ ಮಾಹಿತಿ, ಆರೋಪಿಯ ಹೆಸರು ಮತ್ತು ವಿಳಾಸವನ್ನು ಅದರಲ್ಲಿ ನಮೂದಿಸಲಾಗಿತ್ತು ಎಂದು ನುಡಿಯುತ್ತಾರೆ. ಅಪರಾಧ ಸಂಖ್ಯೆಯನ್ನು ನಮೂದಿಸದೇ ಶೋಧನಾ ವಾರೆಂಟ್ ನ್ನು ಪಡೆಯಲು ಆಗುವುದಿಲ್ಲ ಎಂದರೆ ಸರಿಯಲ್ಲ. ಆ ದಿನ ಸುಮಾರು 9 ರಿಂದ 10 ಪ್ರಕರಣಗಳನ್ನು ದಾಖಲಿಸಲಾಗಿದೆ ಎಂದರೆ ಸರಿ. ಆ ದಿನ ಮೊದಲು ಯಾರ ಮನೆಗೆ ಹೋಗಲಾಗಿತ್ತು ಎನ್ನುವುದು ನನಗೆ ನೆನಪಿಲ್ಲ. ಸದರಿ 9 ಪ್ರಕರಣಗಳ ದಾಖಲಾದ ಪೈಕಿ 9 ಸ್ಥಳಕ್ಕೂ ಕೂಡ ನಾನೇ ಹೋಗಿರುತ್ತೇನೆ ಎಂದರೆ ಸರಿ. ದಾಳಿಯ ಸಂದರ್ಭದಲ್ಲಿ ಪಂಚರುಗಳಿಗೆ ಲಿಖಿತವಾಗಿ ಯಾವುದೇ

ನೋಟೀಸ್ ನ್ನು ಕೊಟ್ಟಿರುವುದಿಲ್ಲ. ಲಿಖಿತವಾಗಿ ನೋಟೀಸ್ ನ್ನು ಕೊಡಲು ಯಾವುದೇ ತೊಂದರೆ ಇರಲಿಲ್ಲ. ಆ ದಿನ ದಾಳಿಗೆ ಹೋದ ಸಮಯದಲ್ಲಿ ನನ್ನ ಜೊತೆ 4 ಜನ ಸಿಬ್ಬಂದಿಗಳು ಮತ್ತು 2 ಜನ ಪಂಚರುಗಳು ಇದ್ದರು. ನಾವು ದಾಳಿ ಮಾಡಲು ನಮ್ಮ ಇಲಾಖಾ ಜೀಪ್ ನಲ್ಲಿ ಹೋಗಿರುತ್ತೇವೆ. ನಮ್ಮ ಠಾಣೆಗೂ ಆರೋಪಿಯ ಮನೆಗೂ ಸುಮಾರು 100 ಮೀಟರ್ ನ ಅಂತರವಿದೆ. ಆರೋಪಿಯ ಮನೆಯ ಅಕ್ಕಪಕ್ಕ ತುಂಬಾ ಮನೆಗಳು ಇವೆ ಎಂದರೆ ಸರಿ. ಆದರೆ ನಿರ್ಧಿಷ್ಟವಾಗಿ ಇಷ್ಟೇ ಮನೆಗಳು ಇವೆ ಎಂದು ಹೇಳಲು ಆಗುವುದಿಲ್ಲ. ಆರೋಪಿಯ ಮನೆಯ ಬಾಗಿಲು ಪೂರ್ವ ದಿಕ್ಕಿಗೆ ಇದೆ. ಸದರಿ ವಿಷಯವನ್ನು ನಿಪಿ-1 ರಲ್ಲಿ ನಮೂದಿಸಲಾಗಿದೆ. ನಾವು ಆರೋಪಿಯ ಮನೆಗೆ ಹೋದಾಗ ಮನೆಯ ಬಾಗಿಲು ತೆರೆದಿತ್ತು. ಸದರಿ ವಿಷಯವನ್ನು ನಿಪಿ-2 ರಲ್ಲಿ ನಮೂದಿಸಿಲ್ಲ. ನಾವು ಆರೋಪಿಯ ಮನೆಗೆ ಹೋದಾಗ ಆರೋಪಿ ಮತ್ತು ಅವರ ತಮ್ಮ ಚಾಸಾ-9 ರವರು ಇದ್ದರು. ಆರೋಪಿಯ ಮನೆಗೆ ದಾಳಿ ಮಾಡಿದ ಸಂದರ್ಭದಲ್ಲಿ ಆಡಿಯೋ ಅಥವಾ ವಿಡಿಯೋವನ್ನು ಮಾಡಿಲ್ಲ. ಆರೋಪಿಯ ಮನೆಯಲ್ಲಿ ಎಷ್ಟು ಕೋಣೆಗಳು ಇವೆ ಎನ್ನುವುದನ್ನು ನಿಪಿ-2 ರಲ್ಲಿ ನಮೂದಿಸಿಲ್ಲ. ಆರೋಪಿಯ ಮನೆಯಲ್ಲಿ ಇದ್ದ ಬೀರು ಕಬ್ಬಿಣದ ಬೀರು ಆಗಿತ್ತು. ಸದರಿ ಬೀರು ಕಬ್ಬಿಣದ ಬೀರು ಎಂದು ನಿಪಿ-2 ರಲ್ಲಿ ನಮೂದಿಸಲಾಗಿದೆ. ಸದರಿ ಬೀರುವಿನ ಬಣ್ಣವನ್ನು ನಿಪಿ-2 ರಲ್ಲಿ ನಮೂದಿಸಿಲ್ಲ. ನಿಪಿ-2 ರ ಮಹಜರ್ ನ್ನು ಸ್ಥಳದಲ್ಲಿ ಬರೆಯಲಾಗಿದೆ. ನಿಪಿ-2 ರ ಮಹಜರ್ ನ್ನು ಲ್ಯಾಪ್ ಟಾಪ್ ನಲ್ಲಿ ಗಣಕೀರಣಗೊಳಿಸಲಾಗಿದೆ. ಸದರಿ ಮಹಜರ್ ನ ಪ್ರಿಲಟ್ ನ್ನು ಠಾಣೆಯಿಂದ ತೆಗೆದುಕೊಂಡು ಬಂದು ಅದಕ್ಕೆ ಸಹಿಗಳನ್ನು ಪಡೆಯಲಾಯಿತು. ನಿಪಿ-2 ರನ್ನು ಠಾಣೆಯಲ್ಲಿಯೇ ಬರೆದು, ಠಾಣೆಯಲ್ಲಿಯೇ ಅದಕ್ಕೆ ಪಂಚರುಗಳ ಸಹಿಗಳನ್ನು ಅದಕ್ಕೆ ಪಡೆಯಲಾಗಿದೆ ಎಂದರೆ ಸರಿಯಲ್ಲ. ಈ ಪ್ರಕರಣದಲ್ಲಿ ನಾನೇ ದಾಳಿ ನಡೆಸಿ, ನಾನೇ ಬಾಗಶಃ ತನಿಖೆಯನ್ನು ಮಾಡಿರುತ್ತೇನೆ ಎಂದರೆ ಸರಿ. ನಾನು ಪ್ರಕರಣವನ್ನು ದಾಖಲಿಸಿ, ನಾನೇ ತನಿಖೆಯನ್ನು ಮಾಡಲು ಕಾನೂನಿನ ಅಡಿಯಲ್ಲಿ ಅವಕಾಶ ಇಲ್ಲ ಎಂದರೆ ಸರಿಯಲ್ಲ. ಇಂತಹ ತನಿಖೆ ಏಕ ಪಕ್ಷೀಯು ಅನ್ನಿಸಿಕೊಳ್ಳುತ್ತದೆ ಎಂದರೆ ಸರಿಯಲ್ಲ. ಯಾವುದೇ ಲೇವಾದೇವಿ ವ್ಯವಹಾರ ಮಾಡಲು ಸಹಾಕರ ಸಂಘಗಳ ಅನುಮತಿಯನ್ನುಪಡೆದುಕೊಳ್ಳಬೇಕು ಎಂದರೆ ಸಾಕ್ಷಿಯು ಮುಂಚೆ ಆ ರೀತಿ ನಿಯಮ ಇರಲಿಲ್ಲ ಆದರೆ ಈಗ ಆ ನಿಯಮ ಇದೆ ಎಂದು ನುಡಿಯುತ್ತಾರೆ. ಆರೋಪಿಯ ಮನೆಗೆ ದಾಳಿ ನಡೆಸುವ ಮುಂಚೆ ಸಹಕಾರ ಸಂಘಗಳಿಗೆ ಯಾವುದೇ ದೂರನ್ನು ನೀಡಿರುವುದಿಲ್ಲ. ದಾಳಿ ಮಾಡುವ ಸಮಯದಲ್ಲಿ ಸಹಕಾರ ಸಂಘಗಳ ಅಧಿಕಾರಿಗಳನ್ನು ಕರೆದುಕೊಂಡು ಹೋಗಲು ಏನಾದರೂ ತೊಂದರೆ ಇತ್ತಾ ಎಂದರೆ ಸಾಕ್ಷಿಯು ಆಗ ಆ ನಿಯಮ ಇರಲಿಲ್ಲ, ಅದ್ದರಿಂದ ನಮಗೆ ಅವಶ್ಯಕತೆ ಇರಲಿಲ್ಲ ಎಂದು ನುಡಿಯುತ್ತಾರೆ. ಲೇವಾದೇವಿಯ ವ್ಯವಾಹರಕ್ಕೆ ಸಂಬಂಧಪಟ್ಟಂತೆ ದಾಳಿ ಮಾಡಲು ನನಗೆ ಅಧಿಕಾರ ಇಲ್ಲ ಎಂದರೆ, ಆಗ ಅಧಿಕಾರ ಇತ್ತು ಎಂದು

ನುಡಿಯುತ್ತಾರೆ. ಆರೋಪಿಯು ಮನೆಗೆ ದಾಳಿ ಮಾಡಿದ್ದ ಸಮಯದಲ್ಲಿ ಅಂದರೆ 2016 ನೇ ಇಸವಿಯಲ್ಲಿ ರೈತರ ಅತ್ಮಹತ್ಯೆ ಹೆಚ್ಚಾಗಿತ್ತು ಎಂದರೆ ಸರಿಯಲ್ಲ. ಆ ಸಂದರ್ಭದಲ್ಲಿ ಸಾಲ ಮಾಡಿದ ಬಗ್ಗೆ ಅಂಕಿ ಅಂಶಗಳನ್ನು ಕೊಡಬೇಕು ಎಂದು ನಮಗೆ ಸರ್ಕಾರದಿಂದ ಒತ್ತಡ ಇತ್ತು ಎಂದರೆ ಸರಿಯಲ್ಲ. ಸರ್ಕಾರಕ್ಕೆ ಅಂಕಿ ಅಂಶಗಳನ್ನು ಸಲ್ಲಿಸಲು ಈ ಸುಳ್ಳು ಪ್ರಕಣವನ್ನು ದಾಖಲಿಸಲಾಗಿದೆ ಎಂದರೆ ಸರಿಯಲ್ಲ. ಆರೋಪಿಯು ಹಣಕಾಸಿನಲ್ಲಿ ಸ್ಥಿತಿವಂತರಲ್ಲ ಮತ್ತು ಕೂಲಿ ಕೆಲಸವನ್ನು ಮಾಡುತ್ತಾರೆ ಎಂದರೆ ಸಾಕ್ಷಿಯ ಆರೋಪಿ ತಾನೇ ಹಾಣಕಾಸಿನಲ್ಲಿ ಸ್ಥಿತಿವಂತಳಾಗಿರುತ್ತೇನೆ ಎಂದು ಒಪ್ಪಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಆರೋಪಿಯು ಸ್ಥಿತಿ ವಂತಿಯಕೆಯ ಬಗ್ಗೆ ನಾನು ವಿಚಾರಿಸಿರುವುದಿಲ್ಲ. ಆರೋಪಿಗೆ ಆಗದೇ ಇರುವವರ ಮಾತನ್ನು ಕೇಳಿಕೊಂಡು ಆರೋಪಿಯ ವಿರುದ್ಧ ಸುಳ್ಳು ಪ್ರ.ವ.ವರದಿಯನ್ನು ದಾಖಲಿಸಲಾಗಿದೆ ಎಂದರೆ

ಸರಿಯಲ್ಲ. ಆರೋಪಿ ಯಾವುದೇ ರೀತಿಯ ಅಕ್ರಮ ಬಡ್ಡಿ ವವಹಾರವನ್ನು ಮಾಡಿಲ್ಲ ಮತ್ತು ಯಾರಿಗೂ ಮೋಸ ಮಾಡಿಲ್ಲ ಎಂದರೆ ಸರಿಯಲ್ಲ. ಎಂ.ಓ-1 ರಿಂದ 27 ರಲ್ಲಿ ಇರುವ ವ್ಯಕ್ತಿಗಳ ವಿಳಾಸಗಳನ್ನು ತಿಳಿದುಕೊಂಡಿದ್ದೀರಾ ಎಂದರೆ ನನ್ನ ನಂತರದ ಅಧಿಕಾರಿಗಳು ಪಡೆದುಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಆರೋಪಿ ಎಷ್ಟು ಶೇಖಡ ಬಡ್ಡಿಯನ್ನು ಪಡೆದುಕೊಳ್ಳುತ್ತಿದ್ದರು ಎನ್ನುವುದರ ಬಗ್ಗೆ ನಿಪಿ-2 ರಲ್ಲಿ ನಮೂದಿಸಿಲ್ಲ. ನನಗೆ ಯಾವುದೇ ಖಾಸಗಿ ವ್ಯಕ್ತಿಗಳು ದೂರು ಕೊಟ್ಟಿಲ್ಲ ಮತ್ತು ನ್ಯಾಯಾಲಯದಲ್ಲಿ ಯಾವುದೇ ಖಾಸಗಿ ವ್ಯಕ್ತಿಗಳು ಯಾವುದೇ ದೂರನ್ನು ಸಲ್ಲಿಸಿಲ್ಲ ಎಂದರೆ ಸರಿ. ಯಾವುದೇ ಒಬ್ಬ ವ್ಯಕ್ತಿ ಅಧಿಕ ಬಡ್ಡಿಯನ್ನು ವಿಧಿಸುತ್ತಿದ್ದ ಸಂದರ್ಭದಲ್ಲಿ ಆತನಿಂದ ಹಣವನ್ನು ಪಡೆದುಕೊಂಡಿದ್ದ ವ್ಯಕ್ತಿ ನ್ಯಾಯಾಲಯಕ್ಕೆ ದೂರನ್ನು ಸಲ್ಲಿಸಬೇಕು ಎಂದರೆ ಸರಿ. ಎಸ್.ಸಪಿ.ಯವರ ನಿರ್ದೇಶನದ ಮೇರೆಗೆ ಈ ಪ್ರಕರಣವನ್ನು ದಾಖಲಿಸಲಾಗಿದೆ ಎಂದರೆ ಸಾಕ್ಷಿಯು ಸದರಿ ನಿರ್ದೇಶನದ ಮೇರೆಗೆ ಮತುತ ನಮಗೆ ಬಾತ್ಮೀದಾರರಿಂದ ಬಂದ ಮಾಹಿತಿಯ ಮೇರೆಗೆ ಈ ಪ್ರಕರಣವನ್ನು ದಾಖಲಿಸಲಾಗಿದೆ ಎಂದು ನುಡಿಯುತ್ತಾರೆ. ಪಂಚರುಗಳಿಗೆ ಆರೋಪಿ ಇಂತಿಷ್ಟೇ ಶೇಖಡ ಬಡ್ಡಿಯನ್ನು ವಿಧಿಸುತ್ತಾರೆ ಎನ್ನುವುದನ್ನು ಪಂಚರುಗಳಿಗೆ ತಿಳಿಸಿಲ್ಲ. ನಮಗೆ ಯಾವುದೇ ಬಾತ್ಮೀದಾರರು ಮಾಹಿತಿಯನ್ನು ತಿಳಿಸಿಲ್ಲ ಮತ್ತು ನಾವು ಯಾವುದೇ ಸ್ಥಳಕ್ಕೆ ಹೋಗಿಲ್ಲ ಎಂದರೆ ಸರಿಯಲ್ಲ. ಆರೋಪಿಯಮನೆಯ ಅಕ್ಕಪಕ್ಕದವರಿಂದ ನಿಪಿ-2 ಕ್ಕೆ ಸಹಿಯನ್ನು ಪಡೆದುಕೊಂಡಿದ್ದೀರಾ ಎಂದರೆ ಸಾಕ್ಷಿಯು ಅವರು ಸಹಿ ಹಾಕಲು ನಿರಾಕರಿಸಿರುತ್ತಾರೆ ಎಂದು ನುಡಿಯುತ್ತಾರೆ. ಆರೋಪಿ ಎಷ್ಟು ಶೇಖಡವಾಗಿ ಬಡ್ಡಿಯನ್ನು ವಿಧಿಸುತ್ತಿದ್ದರು ಎನ್ನುವುದನ್ನು ಆರೋಪಿಯ ಮನೆಯ ಅಕ್ಕಪಕ್ಕದವರಿಂದ ಕೇಳಿ ತಿಳಿದುಕೊಂಡಿರುತ್ತೇನೆ. ಅವರು ಅಧಿಕ ಬಡ್ಡಿ ವಿಧಿಸುತ್ತಾರೆ ಎಂದು ಹೇಳಿದ್ದರು ಆದರೆ ನಿಖರವಾಗಿ ಎಷ್ಟು ಶೇಖಡ ಎಂದು ಹೇಳಿರುವುದಿಲ್ಲ ಈ ವಿಚಾರವನ್ನು ನಿಪಿ-2 ರಲ್ಲಿ ನಮೂದಿಸಿಲ್ಲ. ಹಿರಿಯ ಅಧಿಕಾರಿಗಳ

ಒತ್ತಡಕ್ಕೆ ಆರೋಪಿಗೆ ತೊಂದರೆ ಕೊಡುವ ಉದ್ದೇಶದಿಂದ ಈ ಪ್ರಕರಣವನ್ನು ದಾಖಲಿಸಲಾಗಿದೆ ಎಂದರೆ ಸರಿಯಲ್ಲ. ಒಂದು ವೇಳೆ ಆರೊಪಿ ಹೆಚ್ಚು ಬಡ್ಡಿಯನ್ನು ಪಡೆದುಕೊಳ್ಳುತ್ತಿದ್ದರೆ ಅದನ್ನು ನಿಪಿ-2 ರಲ್ಲಿ ನಮೂದಿಸಿರುತ್ತಿದ್ದೆ ಎಂದರೆ ಸರಿಯಲ್ಲ. ನಾನು ಈ ದಿನ ಕಡತವನ್ನು ನೋಡಿ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ. ಈ ಪ್ರಕರಣಕ್ಕೂ ಆರೋಪಿಗೂ ಯಾವುದೇ ಸಂಬಂಧ ಇಲ್ಲದೇ ಇದ್ದರೂ ಕೂಡ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಆರೋಪಿಯ ಸ್ವಇಚ್ಛಾ ಹೇಳಿಕೆಯನ್ನು ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ.

( ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾ.ದಲ್ಲಿ ಬೆರಳಚ್ಚು ಮಾಡಲಾಯಿತು)

**ಓ.ಹೇ.ಕೇ.ಸ.ಇದೆ.**

( ಶ್ರೀಮತಿ ಚೇತನಾ )
**ಅಧಿಕ ಜೆಎಂಎಫ್‌ಸಿ, ಅರಕಲಗೂಡು.**

ಸದರಿ ಪ್ರಕರಣದ ಕಡತವನ್ನು ಚಾಸಾ-11 ರವರಿಂದ ಪಡೆದುಕೊಂಡು ಅಲ್ಲಿಯವರೆಗಿನ ತನಿಖೆಯನ್ನು ಪರಿಶೀಲಿಸಿ ನಂತರ ತನಿಖೆಯನ್ನು ಮುಂದುವರೆಸಿರುತ್ತೇನೆ.ದಿಃ17-11-2015 ರಂದು ಚಾಸಾ-9 ರವರನ್ನು ಸದರಿ ಪ್ರಕರಣದಲ್ಲಿ ವಶಪಸಿಕೊಂಡ ವಸ್ತುಗಳನ್ನು ರಾಸಾಯನಿಕ ಪರೀಕ್ಷೆಗಾಗಿ ರಾಸಾಯಕ ಕೇಂದ್ರ ಮೈಸೂರು ಇಲ್ಲಿಗೆ ಕಳುಹಿಸಿಕೊಟ್ಟಿರುತ್ತೇನೆ. ನಂತರ ಇದರ ಬಗ್ಗೆ ಚಾಸಾ-9 ರವರ ಹೇಳಿಕೆಯನ್ನು ಕೂಡ

ದಾಖಲಿಸಿರುತ್ತೇನೆ. ಸದರಿ ರಾಸಾಯನಿಕ ಪರೀಕ್ಷಾ ವರದಿಯನ್ನು ಪಡೆದುಕೊಂಡಿರುತ್ತೇನೆ. ಸದರಿ ರಾಸಾಯನಿಕ ಪರೀಕ್ಷಾ ವರದಿಯನ್ನು ನೋಡಿದರೆ ಗುರುತಿಸಬಲ್ಲೆ. ಅದನ್ನು ಸಾಕ್ಷಿಯು ನೋಡಿ ಗುರುತಿಸುತ್ತಿದ್ದು, ಅದನ್ನು ನಿಪಿ-5 ಎಂದು ಹಾಗೂ ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ-5(ಎ) ಎಂದು ಗುರುತಿಸಲಾಯಿತು. ನಂತರ ಆರೋಪಿಯ ವಿರುದ್ಧ ಆರೋಪ ಸಾಬೀತಾದ ಕಾರಣ ಆರೋಪಿಯ ವಿರುದ್ಧ ದೋಷರೋಪಣ ಪಟ್ಟಿಯನ್ನು ಘನ ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಯವರಿಗೆ ನಿವೇದಿಸಿಕೊಂಡಿರುತ್ತೇನೆ.

(ಪಾಟೀ ಸವಾಲುಃ ಆರೋಪಿಯ ಪರ ವಕೀಲರು ಸಮಯಾವಕಾಶವನ್ನು ಕೋರಿದ್ದು ಅನುಮತಿಸಲಾಯಿತು)

( ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾ.ದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇದೆ.

( ಶ್ರೀಮತಿ ಚೇತನಾ )
ಅಧಿಕ ಜೆಎಂಎಫ್‌ಸಿ, ಅರಕಲಗೂಡು.